ಸಾಧ್ಯವಿಲ್ಲ. ಹಣದ ಕೊರತೆಯಿಂದ ಮತ್ತು ಈಗಾಗಲೇ ೧೪ ಲಕ್ಷ ರೂಪಾಯಿ ಖರ್ಚಾಗಿರುವುದರಿಂದ ಇನ್ನೊಂದು ಪ್ರಾಣಿ ಸಂಗ್ರಹಾಲಯವನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ.—ಗದಗ್ ಹತ್ತಿರ ಏನು ಪ್ರಾಣಿಸಂಗ್ರಹಾಲಯ ಮಾಡುತ್ತಿದ್ದೀರಿ. ಅದು ಊರು ಬಿಟ್ಟು ಹೊರಗಡೆ ಇದೆ. ಅಲ್ಲಿಗೆ ಯಾರೂ ಹೋಗಲಿಕ್ಕೆ ಸಾಧ್ಯವಿಲ್ಲ. ಧಾರವಾಡ ಮಂಡಲಕ್ಕೆಂದ್ರ ಮತ್ತು ದೊಡ್ಡ ನಗರವಾಗಿದೆ. ಇಂತಹ ಕಡೆ ಪ್ರಾಣಿ ಸಂಗ್ರಹಾಲಯ ಮಾಡಿದರೆ ಅತ್ಯಂತ ಸೂಕ್ತವಾಗಿರುತ್ತದೆ. ದುಡ್ಡು ಖರ್ಚುಮಾಡಿದರೂ ಪ್ರಯೋಜನ ಆಗಬೇಕು. ಹೀಗಿರುವಾಗ ಗದಗ್ ಸಮೀಪದಲ್ಲಿ ಪ್ರಾಣಿ ಸಂಗ್ರಹಾಲಯ ಮಾಡಿ ಏನು ಪ್ರಯೋಜನ?

ಶ್ರೀ ಬಿ. ಎ. ಜೀವಿಜಯ.—ವನ್ಯ ಪ್ರಾಣಿಗಳನ್ನು ರಕ್ಷಿಸುವ ಯೋಜನೆಯಲ್ಲಿ ಅರಣ್ಯ ಇಲಾಖೆಗೆ ೪೦ ಲಕ್ಷರೂಪಾಯಿಗಳಷ್ಟೇ ಸಿಗುತ್ತಿದೆ. ಆದ್ದರಿಂದ ಇದು ಸಾಧ್ಯವಾಗುವುದಿಲ್ಲ. ೧೯೭೨ನೇ ಇಸವಿಯಲ್ಲಿ ಗದಗ್‌ನಲ್ಲಿ ಪ್ರಾಣಿಸಂಗ್ರಹಾಲಯ ತೆರೆಯಬೇಕೆಂದು ಅಂದಿನ ಸರ್ಕಾರ ೫೪ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದೆ. ಈಗ ಯಾವ ಕಾರಣಕ್ಕೂ ಇದನ್ನು ಧಾರವಾಡಕ್ಕೆ ಸ್ಥಳಾಂತರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಧಾರವಾಡದಲ್ಲಿ ಇರತಕ್ಕ ಪ್ರಾಣಿ ಸಂಗ್ರಹಾಲಯವನ್ನೇ ಸ್ವಲ್ಪ ಇಂಪ್ರೂವ್ ಮಾಡಬೇಕೆಂದು ಪ್ರಯತ್ನಪಡುತ್ತಿದ್ದೇವೆ.

ಬ್ಯಾಡಗಿ ತಾಲ್ಲೂಕಿನಲ್ಲಿ ಅಂಗನವಾಡಿ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ

೧೪೦೭. ಶ್ರೀ ಕೆ. ಎಸ್. ಬೀಳಗಿ (ಬ್ಯಾಡಗಿ):—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬ್ಯಾಡಗಿ ಕ್ಷೇತ್ರವು ಮೀಸಲು ಕ್ಷೇತ್ರವಿದ್ದರೂ ಅಂಗನವಾಡಿಗಳನ್ನು ತೆರೆಯದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ೧೯೮೬-೮೭ನೇ ಸಾಲಿನಲ್ಲಿ ಸದರಿ ತಾಲ್ಲೂಕಿಗೆ ಅಂಗನವಾಡಿ ಯೋಜನೆಯನ್ನು ವಿಸ್ತರಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಬಂದಿದೆ.

ಆ) ಬ್ಯಾಡಗಿ ತಾಲ್ಲೂಕಿಗೆ ೭ನೇ ಪಂಚವಾರ್ಷಿಕ ಯೋಜನೆಯೊಳಗೆ ಯೋಜನೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಉಪಾಧ್ಯಕ್ಷರು.—ಶ್ರೀ ಆರ್. ಎಸ್. ಮಾನೆ ಮತ್ತು ಶ್ರೀ ಕೆ. ಜಿ. ಜಾರ್ಜ್ ಅವರು ಸ್ವಲ್ಪ ಹೊತ್ತು ಬಿಟ್ಟು ಪ್ರಶ್ನೆ ಕೇಳಲಿ, ಮಂಡಲ ಮಂತ್ರಿಗಳು ಬರುತ್ತಾರೆ.

ಪ್ರಶ್ನೆ. ೧೬೨೧—ಮಾನ್ಯ ಸದಸ್ಯರಾದ ಶ್ರೀ ಜಿ. ಎಸ್. ಶಿವನಂಜಪ್ಪ ಅವರು ಹಾಜರಿಲ್ಲ.

ಉಪಾಧ್ಯಕ್ಷರು.—ಶ್ರೀ ಶ್ರೀರಂಗದೇವರಾಯಲು ಅವರು ಕೇಳಬೇಕಾಗಿದ್ದ ಪ್ರಶ್ನೆ ಸಂಖ್ಯೆ ೧೪೦೯—ಇದನ್ನು ತಡೆಹಿಡಿಯಲಾಗಿದೆ. ಮುಂದಿನ ಪ್ರಶ್ನೆಗೆ ಹೋಗೋಣ.

ದೇವರ ಕಾಡು ಅರಣ್ಯದಲ್ಲಿ ಮರಗಳನ್ನು ಕಡಿಯುವುದು

೧೬೩೯. ಶ್ರೀ ಡಿ. ಎ. ಚಿನ್ನಪ್ಪ (ಮಂಡಿಕೇರಿ):—ಮಾನ್ಯ ಅರಣ್ಯ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗಿನಲ್ಲಿ ಎಷ್ಟು ಎಕರೆ ದೇವರಕಾಡು ಅರಣ್ಯ ಇಲಾಖೆಯ ಅಧೀನದಲ್ಲಿದೆ?

ಆ) ಈ ಪೈಕಿ ದೇವರಕಾಡಿನಿಂದ ಎಷ್ಟು ಮರಗಳನ್ನು ಕಡಿಯಲಾಗಿದೆ. ಹಾಗೂ ಕಡಿದ ಮರಗಳ ಮೌಲ್ಯ ಎಷ್ಟು?

ಇ) ಮರ ಕಡಿದ ದೇವರ ಕಾಡುಗಳನ್ನು ಜನರು ಅಕ್ರಮ ಪ್ರವೇಶ ಮಾಡಿದ ಪ್ರದೇಶ ಎಷ್ಟು?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—

ಅ) ಕೊಡಗಿನಲ್ಲಿ ಈಗ ಇರುವ ದೇವರ ಕಾಡಿನ ವಿಸ್ತೀರ್ಣವು ೩೩೬೫.೫೭೦ ಹೆಕ್ಟೇರು ಆಗಿದೆ.

ಆ) ದೇವರಕಾಡಿನಲ್ಲಿ ಒಟ್ಟು ೧೫೮೫.೨೯೭ ಕಿ.ಮೀ. ಪ್ರಮಾಣದ ಬೆಳೆದ ಹಾಗೂ ಒಣಗಿ ಸತ್ತ ಮರಗಳನ್ನು ಕಡಿಯಲಾಗಿದೆ. ಮತ್ತು ಇದರ ಬೆಲೆ ಅಂದಾಜು ರೂ. ೧೫ ಲಕ್ಷ ಆಗಿದೆ.

ಇ) ಮರ ಕಡಿದ ನಂತರ ದೇವರ ಕಾಡಿನಲ್ಲಿ ಜನರು ಅಕ್ರಮ ಪ್ರವೇಶ ಮಾಡಿರುವುದಿಲ್ಲ. ಮರ ಕಡಿಯುವ ಮೊದಲೆ ಕೆಲವು ಜಾಗಗಳಲ್ಲಿ ಜನರು ಅಕ್ರಮ ಪ್ರವೇಶ (ಅತಿಕ್ರಮಣ) ಮಾಡಿರುವರೆಂದು ಅದನ್ನು ಅಳತೆ ಮಾಡದೇ ಇರುವುದರಿಂದ ಅದರ ವಿಸ್ತೀರ್ಣ ಎಷ್ಟೆಂದು ನಿಖರವಾಗಿ ಹೇಳುವಂತಿಲ್ಲ. ಇದನ್ನು ಇಷ್ಟರಲ್ಲೇ ಅಳತೆ ಮಾಡಿಸಲಾಗುವುದು.

೧೬೫೧. ಮಾನ್ಯ ಸದಸ್ಯರಾದ ಶ್ರೀ ನಂಜಯ್ಯನ್ ಮಂಕ್ ಅವರು ಗೈರು ಹಾಜರಿದ್ದರು.

೧೬೫೯. ಶ್ರೀ ಡಿ. ಎ. ಚಿನ್ನಪ್ಪ.— ಕೊಡಗಿನಲ್ಲಿ ದೇವರಕಾಡಿನಿಂದ ಬಂದಂತಹ ೧೫ ಲಕ್ಷ ರೂಪಾಯಿ ಉತ್ಪತ್ತಿಯಲ್ಲಿ ಆಯಾಯ ದೇವಸ್ಥಾನಗಳಿಗೆ ಏನಾದರೂ ಸ್ವಲ್ಪ ಭಾಗವನ್ನು ಕೊಡುತ್ತೀರಾ? ಸಾಧಾರಣವಾಗಿ ದೇವರಕಾಡಿನಲ್ಲಿ ಬಂದ ಉತ್ಪತ್ತಿಯನ್ನು ಮೊದಲು ಅದೇ ದೇವಸ್ಥಾನಕ್ಕೆ ಉಪಯೋಗಿಸುತ್ತಿದ್ದರು. ಈ ರೀತಿಯಿಂದ ಬಂದಂಥ ಉತ್ಪತ್ತಿಯ ಸ್ವಲ್ಪ ಭಾಗವನ್ನು ದೇವಸ್ಥಾನಗಳಿಗೆ ಕೊಡುತ್ತೀರಾ ?

ಶ್ರೀ ಬಿ. ಎ. ಜೀವಿಜಯ.— ದೇವರಕಾಡಿನಲ್ಲಿ ಕಡಿದ ಮರದ ಉತ್ಪತ್ತಿಯನ್ನು ಇದುವರೆಗೂ ಕೊಡಗಿನ ದೇವಸ್ಥಾನಗಳಿಗೆ ಕೊಟ್ಟಿರತಕ್ಕಂಥ ದಾಖಲೆಗಳು ಇಲ್ಲ. ಆದರೂ ಕೂಡ ಕೊಡಗಿನ ದೇವರ ಕಾಡಿನ ಮರಗಳಿಂದ ಬರುವ ಉತ್ಪತ್ತಿಯ ಒಂದಿಷ್ಟು ಭಾಗವನ್ನು ಆಯಾ ದೇವಸ್ಥಾನಗಳಿಗೆ ಕೊಡಬೇಕೆಂದು ಹೇಳಿ ಹಿಂದಿನ ದಾಖಲೆಗಳು ಇವೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಡಿ.ಎ. ಚನ್ನಪ್ಪ.— ಇದನ್ನು ಕೊಡಬೇಕೆಂದು ನಾನಂ ಹೇಳುತ್ತೇನೆ. ಇದೇರೀತಿ ಕೊಡಗಿನಲ್ಲಿ ಅಂದಡಿಮರಗಳನ್ನು ಅವುಗಳಂ ಒಣಗಿದ ಮೇಲೆ ಕಡಿಯಲಿಕ್ಕೆ ಅರಣ್ಯ ಇಲಾಖೆಯವರು ಅನುಮತಿ ಕೊಡಬೇಕು. ಈ ಮರಗಳನ್ನು ಕಡಿಯಲಿಕ್ಕೆ ಅನುಮತಿ ಕೊಟ್ಟರೆ ಸುಮಾರು ಲಕ್ಷದಷ್ಟು ಉತ್ಪತ್ತಿ ಸರ್ಕಾರಕ್ಕೆ ಬರಬಹುದು. ಇಂತಹ ಮರಗಳಿಗೆ ಮಾರಾಟ ಮಾಡಲಿಕ್ಕೆ ಕೂಡಲೇ ಅನುಮತಿ ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎ. ಜೀವಿಜಯ.— ಇದು ಮೂಲ ಪ್ರಶ್ನೆಯ ವ್ಯಾಪ್ತಿಗೆ ಬರುವುದಿಲ್ಲ. ಬೇರೆ ಪ್ರಶ್ನೆಯನ್ನು ಕಳಿಸಿದರೆ ಉತ್ತರ ಕೊಡುತ್ತೇನೆ.

ನಂಜನಗೂಡಂ ನ್ಯಾಯಾಲಯಂದ ಕಟ್ಟಡಗಳ ಕೆಲಸ

೧೬೫೫. ಶ್ರೀ ಡಿ. ಟಿ. ಜಯಂಕುಮಾರ್ (ನಂಜನಗೂಡು).— ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಂಜನಗೂಡಿನಲ್ಲಿ ಕಟ್ಟುತ್ತಿರುವ ನ್ಯಾಯಾಲಯ ಕಟ್ಟಡ ಪ್ರಾರಂಭವಾದ ದಿನಾಂಕ ಯಾವುದು ? ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು ?

ಆ) ಕಟ್ಟಡದ ಅಂದಾಜು ವೆಚ್ಚ ವೆಷ್ಟು ?

ಇ) ಕಟ್ಟಡದ ಕೆಲಸವು ಯಾವಾಗ ಪೂರ್ಣಗೊಳ್ಳುವುದು ?

ಶ್ರೀ ಹೆಚ್. ಡಿ. ದೇವೇಗೌಡ. (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ೨೮ ಫೆಬ್ರುವರಿ ೧೯೮೫ ರಂದು.

ಆ) ೧೨,೦೦,೦೦೦ ರೂಪಾಯಿಗಳು.

ಇ) ೧೯೮೭ರ ಮಾರ್ಚ್ ಅಂತ್ಯದೊಳಗೆ ಮುಗಿಯುವ ನಿರೀಕ್ಷೆಯಿದೆ.